quickmarketreports.com

Date : 04-11-2015

# ಎಣ್ಣೆ ಬೀಜಗಳ ಉತ್ಪಾದನೆ ತೀವ್ರ ಬಾದಿತ–ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ (SEA) ಎಸೋಸಿಯೇಶನ್

ಸತತ ಎರಡು ವರ್ಷಗಳ ಬರಸಮಾನ ಪರಿಸ್ಥಿತಿಯಿಂದ ಭಾರತ ಎಣ್ಣೆ ಬೀಜಗಳ ಉತ್ಪಾದನೆ ತೀವ್ರ ಬಾಧಿತವಾಗಬಹುದೆಂದು ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಎಸೋಸಿಯೇಶನ್ ಹೇಳಿದೆ. ಸತತ ಎರಡನೇ ವರ್ಷ ಬರಸಮಾನ ಪರಿಸ್ಥಿತಿಯಿರುವುದು ದೌರ್ಭಾಗ್ಯಪೂರ್ಣ ಹಾಗೂ ಈ ವರ್ಷದಲ್ಲಿ 88% ಶೇಕಡಾ ಮಾತ್ರ ದೀರ್ಘಾವಧಿಯ ಮಳೆಯಾಗಿರುವುದರಿಂದ ಎಣ್ಣೆ ಬೀಜಗಳ ಉತ್ಪಾದನೆ ತೀವ್ರವಾಗಿ ಪರಿಣಾಮ ಬೀರಬಹುದೆಂದು SEAಯ ಅಧ್ಯಕ್ಷ ಪ್ರವೀಣ್ ಲಂಕಡ್ ಹೇಳಿದರೆನ್ನಲಾಗಿದೆ. ಸೋಯಾಬೀನ್ ಉತ್ಪಾದನೆ 85ಲಕ್ಷ ಟನ್‌ಗಳು, ನೆಲಗಡಲೆ 31ಲಕ್ಷ ಟನ್‌ಗಳು, ಎಣ್ಣೆಬೀಜ 4.6ಲಕ್ಷ ಟನ್‌ಗಳು ಹಾಗೂ ಸೂರ್ಯಕಾಂತಿ 0.5ಲಕ್ಷ ಟನ್‌ಗಳಾಗಿ ಹಿಂದಿನ ವರ್ಷಕ್ಕೆ ಹೋಲಿಸಿದಾಗ 5.3ಲಕ್ಷ ಟನ್ ಕಡಿಮೆಯಾಗುವ ನಿರೀಕ್ಷೆಯಿದೆಯೆಂದ SEA ಯ ಹಿಂದಿನ ಅಧ್ಯಕ್ಷ ಜಿ.ಜಿ. ಪಟೇಲ್ ಹೇಳಿದರೆನ್ನಲಾಗಿದೆ. ದೇಶದ ತೈಲಬೀಜ ಉತ್ಪಾದನೆ ಹೆಚ್ಚುಕಡಿಮೆ ಸ್ಥಿರವಾಗಿದ್ದು, 27–28 ಲಕ್ಷ ಟನ್‌ಗಳಲ್ಲಿ ಕೆಲವು ವರ್ಷಗಳಿಂದ ಇದೆ ಈಗ ರೈತರು ಮತ್ತು ಕೈಗಾರಿಕೆ ಸರಕಾರಕ್ಕೆ, ಕೀಟಬಾಧೆ, ಬರ ನಿರೋಧಕ ಶಕ್ತಿಯುಳ್ಳ ಆಧುನಿ ಜೆನೆಟಿಕ್ ತೈಲಬೀಜಗಳಿಗೆ ಪರವಾನಗಿ ನೀಡಬೇಕೆಂದು ಹಾಗೂ ಇದು ತೈಲಬೀಜಗಳ ಉತ್ಪಾದನೆ ಹೆಚ್ಚಳಕ್ಕೆ ಸಹಕಾರಿಯಾಗಬಹುದೆಂದು ಲಿಂಕಡ್ ಹೇಳಿದ್ದಾರೆನ್ನಲಾಗಿದೆ. ಸೋಯಾಬೀನ್ ಫ್ಯೂಚರ್ ಟ್ರೇಡಿಂಗ್‌ನಲ್ಲಿ ಕ್ರತಕತೆಯಿದ್ದು, ಯಾವುದೇ ತಾತ್ವಿಕ ಕಾರಣವಿಲ್ಲದೆ ಸೋಯಾಬೀನ್ ದರಗಳು ವ್ಯತ್ಯಾಯಗೊಳ್ಳುತ್ತಿದ್ದು ರೈತರು ಮತ್ತು ಕೈಗಾರಿಕೆ ಹಾಗೂ ಎಣ್ಣೆ ಹಿಂಡಿಗಳ ರಫ್ತುದಾರರು ಹಾನಿ ಅನುಭವಿಸುವಂತಾಗಿದೆ. ಇದಕ್ಕಾಗಿ ಎಸ್.ಇ.ಎ. ಸೆಬಿ ಅಧ್ಯಕ್ಷರಿಗೆ ಪರಿಣಾಮಕಾರಿ ಕ್ರಮಕೈಗೊಳ್ಳಲು ಹಾಗೂ ಮಾರುಕಟ್ಟೆಯ ಸ್ಥಿರವಾಗಿರಿಸಲು ಪ್ರಯತ್ನಿಸಬೇಕೆಂದು ಬಲವಾಗಿ ಕೇಳಿಕೊಂಡಿದೆಯೆನ್ನಲಾಗಿದೆ. ರಫ್ತು ಹಿನ್ನೆಡೆ ತಡೆಯಲು ಪರಿಣಾಮಕಾರಿ ಕ್ರಮಕೈಗೊಳ್ಳಬೇಕು, ಎಸ್. ಎ.ಎ.ಆರ್.ಸಿ. ರಾಷ್ಟ್ರಗಳಿಗೆ ರಫ್ತು ಮಾಡಲು ರೈಲ್ವೆ ರ್‍ಯಾಕ್‌ಗಳು ಸುಲಭವಾಗಿ ಲಭ್ಯವಾಗಬೇಕು, ಖಾದ್ಯತೈಲಗಳ ಮೇಲೆ ಆಮದು ತೆರಿಗೆ ಹೆಚ್ಚಿಸಬೇಕು ಹಾಗೂ ಇದರಿಂದ ಎಣ್ಣೆ ಹಿಂಡಿ ರಫ್ತುದಾರರಿಗೆ ಅನುಕೂಲವಾಗಬಹುದು, ತೈಲಬೀಜಗಳ ಆಮದು ದರ ಇಳಿಸಬೇಕು, ರೈಸ್‌ಬ್ರಾನ್ ಮತ್ತು ಎಣ್ಣೆ ಹಿಂಡಿಗಳ ಮೇಲೆ ಶೂನ್ಯಕರವಿರಬೇಕು. ಇದರಿಂದ ಕಚ್ಚಾ ಸಾಮಾಗ್ರಿ ಲಭ್ಯತೆ ಹೆಚ್ಚಳವಾಗಿ ಸಂಸ್ಕರಣಾ ಕೈಗಾರಿಕೆಗಳಿಗೆ ಸಹಾಯಕವಾಗ ಬಹುದೆಂದು ಲಿಂಕಡ್ ಹೇಳಿದ್ದಾರೆನ್ನಲಾಗಿದೆ.